# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ ಎ<br>Part – IV A | ಬೆಂಗಳೂರು, ಗುರುವಾರ, ೦೭, ಮಾರ್ಚ್, ೨೦೨೪(ಫಾಲ್ಗುಣ, ೧೭, ಶಕವರ್ಷ, ೧೯೪೫)<br>BENGALURU, THURSDAY, 07, MARCH, 2024(PHALGUNA, 17, SHAKAVARSHA, 1945) | ನಂ. ೧೬೫<br>No. 165 |


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

### ಸಂಖ್ಯೆ: ಸಂವ್ಯಶಾಇ 07 ಶಾಸನ 2024, ದಿನಾಂಕ: 07.03.2024

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ **ವಿಧೇಯಕ,** 2024 ಇದಕ್ಕೆ 2024ರ ಮಾರ್ಚ್ ತಿಂಗಳ 06ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024ರ ಕರ್ನಾಟಕ ಅಧಿನಿಯಮ ಸಂಖ್ಯೆ:13 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2024ರ ಕರ್ನಾಟಕ ಅಧಿನಿಯಮ ಸಂಖ್ಯೆ:13

(2024 ರ ಮಾರ್ಚ್ ತಿಂಗಳ 07ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮ, 2024

(2024 ರ ಮಾರ್ಚ್ ತಿಂಗಳ 06ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಅವರ ಉತ್ತಮ ಜೀವನವನ್ನು ಉತ್ತೇಜಿಸುವ ಇತರೆ ಕ್ಷೇಮಾಭಿವೃದ್ಧಿ ಕ್ರಮಗಳಿಗಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಅವರ ಉತ್ತಮ ಜೀವನವನ್ನು ಉತ್ತೇಜಿಸುವ ಇತರೆ ಕ್ಷೇಮಾಭಿವೃದ್ಧಿ ಕ್ರಮಗಳಿಗಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗೀಕವಾದ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು, ಪ್ರಾರಂಭಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಪ್ರತಿಯೊಂದು ಮೋಟಾರು ಸಾರಿಗೆ ಉದ್ಯಮ, ಗ್ಯಾರೇಜ್‌ಗಳು, ಕಾರ್ಯಗಾರಗಳು, ಮೋಟಾರು ವಾಹನ ಹೊರಕವಚ ನಿರ್ಮಾಣ ಸಂಸ್ಥೆ ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿತಕ್ಕ ಯಾವುದೇ ಇತರೆ ಕಾರ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ ಅನ್ವಯವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು**.- (1) ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) “ಮಂಡಳಿ” ಎಂದರೆ 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ;

(ಬಿ) “ಉಪಕರ” ಎಂದರೆ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 35)ರ ಅಡಿಯಲ್ಲಿ ವಿಧಿಸಲಾದ ಹಾಗೂ ಸಂಗ್ರಹಿಸಲಾದ ಉಪಕರ ಮತ್ತು 14ನೇ ಪ್ರಕರಣದ ಅಡಿಯಲ್ಲಿ ಸೃಜಿಸಲಾದ ನಿಧಿಗೆ ಪುನರ್‌ವಿನಿಯೋಗಿಸಿದ ಉಪಕರದ ಅಂಥ ಮೊತ್ತ ಅಥವಾ ಪ್ರತಿಶತ;

(ಸಿ) “ಕುಟುಂಬ” ಎಂಬುದು, ನೋಂದಾಯಿತ ಕಾರ್ಮಿಕರ ಪತ್ನಿ ಅಥವಾ ಪತಿ, ಅಪ್ರಾಪ್ತ ವಯಸ್ಸಿನ ಮಕ್ಕಳು ಹಾಗೂ ಅವಿವಾಹಿತ ಮಗಳು ಮತ್ತು ಆತನ ಮೇಲೆ ಸಂಪೂರ್ಣವಾಗಿ ಅವಲಂಭಿತಾರ ಆತನ ತಂದೆ, ತಾಯಿ ಮತ್ತು ಮಾನಸಿಕ ಅಸ್ವಸ್ಥ ಅಥವಾ ವಿಕಲಚೇತನ ಅಥವಾ ವಿಧವೆ ಮಗಳು ಒಳಗೊಳ್ಳುತ್ತದೆ;

(ಡಿ) “ನಿಧಿ” ಎಂದರೆ, ಈ ಅಧಿನಿಯಮದ 14ನೇ ಪ್ರಕರಣದ ಅಡಿಯಲ್ಲಿ ಸೃಜಿಸಲಾದ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ನಿಧಿ;

(ಇ) “ಸರ್ಕಾರ” ಎಂದರೆ ಕರ್ನಾಟಕ ಸರ್ಕಾರ;

(ಎಫ್) “ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರು” ಎಂಬುದು,-

(i) ಸಾರಿಗೆ ವಾಹನದಲ್ಲಿ ವೃತ್ತಿಪರ ಸಾಮರ್ಥ್ಯದಲ್ಲಿ ಕೆಲಸ ಮಾಡಲು ಅಥವಾ ಅಂಥ ಮೋಟಾರು ವಾಹನದ ಆಗಮನ, ನಿರ್ಗಮನ, ಲೋಡಿಂಗ್ ಅಥವಾ ಅನ್ ಲೋಡಿಂಗ್ ಸಂಬಂಧದಲ್ಲಿ ಕರ್ತವ್ಯಗಳಿಗೆ ಹಾಜರಾಗಲು ನೇರವಾಗಿ ಅಥವಾ ಏಜೆನ್ಸಿಯ ಮೂಲಕ ಮೋಟಾರು ಸಾರಿಗೆ ಉದ್ಯಮದಲ್ಲಿ ನಿಯೋಜಿತನಾದ ವ್ಯಕ್ತಿ ಮತ್ತು ಇದು ಚಾಲಕ, ನಿರ್ವಾಹಕ, ಕ್ಲೀನರ್, ನಿಲ್ದಾಣ ಸಿಬ್ಬಂದಿ, ಮಾರ್ಗ ಪರಿಶೀಲನಾ ಸಿಬ್ಬಂದಿ, ಬುಕಿಂಗ್ ಗುಮಾಸ್ತ, ನಗದು ಗುಮಾಸ್ತ, ಡಿಪೋ ಗುಮಾಸ್ತ, ಸಮಯ ಸೂಚಕ, ಕಾವಲುಗಾರ ಅಥವಾ ಪರಿಚಾರಕನನ್ನು ಒಳಗೊಳ್ಳುತ್ತದೆ;

(ii) ಮೋಟಾರು ಗ್ಯಾರೇಜ್‌ಗಳಲ್ಲಿ, ಟೈರ್ ಜೋಡಿಸುವ ಮತ್ತು ಬೇರ್ಪಡಿಸುವ ಘಟಕಗಳಲ್ಲಿ, ಪಂಚರ್ ದುರಸ್ತಿ ಮಳಿಗೆಗಳಲ್ಲಿ, ವ್ಹೀಲ್ ಬ್ಯಾಲೆನ್ಸಿಂಗ್ ಮತ್ತು ಅಲೈನ್‌ಮೆಂಟ್ ಘಟಕಗಳಲ್ಲಿ, ನೀರಿನಿಂದ ಸ್ವಚ್ಛಗೊಳಿಸುವ ಘಟಕಗಳಲ್ಲಿ ಕೆಲಸ ಮಾಡುವ ವ್ಯಕ್ತಿ; ಮತ್ತು

(iii) ಮೋಟಾರು ವಾಹನ ಹೊರಕವಚ ನಿರ್ಮಾಣ ಘಟಕಗಳಲ್ಲಿ, ಟಿಂಕರಿಂಗ್, ಎಲೆಕ್ಟ್ರಿಕಲ್ ಹಾಗೂ ಎಸಿ ಘಟಕಗಳಲ್ಲಿ ಕೆಲಸ ಮಾಡುವ ವ್ಯಕ್ತಿ, ಆದರೆ ಈ ಮುಂದಿನವರು ಒಳಗೊಳ್ಳುವುದಿಲ್ಲ, ಎಂದರೆ,-

(ಎ) ಕಾರ್ಖಾನೆಗಳ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ ಸಂ. 63) ರ 2ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಿದ ಯಾರೇ ಅಂಥ ಕಾರ್ಮಿಕ;

(ಬಿ) ಸರ್ಕಾರದಲ್ಲಿ ಅಥವಾ ಸರ್ಕಾರಿ ಸಂಸ್ಥೆಯಲ್ಲಿ ನಿಯೋಜಿತನಾದ ಯಾರೇ ವ್ಯಕ್ತಿ; ಮತ್ತು

(ಸಿ) ಮುಖ್ಯವಾಗಿ ವ್ಯವಸ್ಥಾಪನ ಅಥವಾ ಆಡಳಿತಾತ್ಮಕ ಪದದಲ್ಲಿ ನಿಯೋಜಿತನಾದ ವ್ಯಕ್ತಿ.

(ಜಿ) "ಮೋಟಾರು ಸಾರಿಗೆ ಉದ್ಯಮ" ಎಂದರೆ, ಮೋಟಾರು ಸಾರಿಗೆ ಕಾರ್ಮಿಕ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ ಸಂಖ್ಯೆ 27)ರ 2ನೇ ಪ್ರಕರಣದ (ಜಿ) ಖಂಡದಲ್ಲಿ ಪರಿಭಾಷಿಸಲಾದ ಮೋಟಾರು ಸಾರಿಗೆ ಉದ್ಯಮ;

(ಎಚ್) "ಅಧಿಸೂಚನೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಒಂದು ಅಧಿಸೂಚನೆ;

(ಐ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಜೆ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(ಕೆ) "ಸ್ಕೀಮ್" ಎಂದರೆ, ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿಗಾಗಿ ಸರ್ಕಾರವು ಅಧಿಸೂಚಿಸಿದ ಸ್ಕೀಮ್; ಮತ್ತು

(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸಿರದ ಮೋಟಾರು ವಾಹನಗಳಿಗೆ ಸಂಬಂಧಿಸಿದ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 35)ರಲ್ಲಿ ಇದ್ದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಮಂಡಳಿಯ ರಚನೆ**,- (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, " ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ" ಎಂಬ ಹೆಸರಿನ ಒಂದು ಮಂಡಳಿಯನ್ನು ರಚಿಸತಕ್ಕದ್ದು.

(2) ರಾಜ್ಯ ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | |
|---|---|
| (ಎ) ಕಾರ್ಮಿಕ ಮಂತ್ರಿ, ಕರ್ನಾಟಕ ಸರ್ಕಾರ | ಪದ ನಿಮಿತ್ತ ಅಧ್ಯಕ್ಷರು |
| (ಬಿ) ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ | ಪದನಿಮಿತ್ತ ಉಪಾಧ್ಯಕ್ಷರು |
| (ಸಿ) (i) ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಾರಿಗೆಇಲಾಖೆ,<br>(ii) ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ,<br>(iii) ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕಇಲಾಖೆ,<br>(iv) ಆಯುಕ್ತರು, ಸಾರಿಗೆಇಲಾಖೆ,<br>(v) ಆಯುಕ್ತರು, ವಾಣಿಜ್ಯ ತೆರಿಗೆಇಲಾಖೆ, | ಪದನಿಮಿತ್ತ ಸದಸ್ಯರು |
| (ಡಿ) ಕರ್ನಾಟಕ ಸರ್ಕಾರವು ನಾಮನಿರ್ದೇಶಿಸುವ ಹತ್ತು ಸದಸ್ಯರು, ಅವರ ಪೈಕಿ,-<br>(i)ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಯಗಳಲ್ಲಿ ತೊಡಗಿರುವ ಕಾರ್ಮಿಕರನ್ನು ಪ್ರತಿನಿಧಿಸುವ ಐವರು ಸದಸ್ಯರು<br>(ii) ಮೋಟಾರು ಸಾರಿಗೆ ಉದ್ಯಮಗಳ ಮತ್ತು ಇತರೆ ಅಂಥದ್ದೇ ಕಾರ್ಯಸಂಸ್ಥೆಗಳ ಉದ್ಯೋಗದಾತರನ್ನು ಪ್ರತಿನಿಧಿಸುವ ಐವರು ಸದಸ್ಯರು; ಮತ್ತು | ಸದಸ್ಯರು |

| | |
|---|---|
| (ಇ) ಕಾರ್ಮಿಕ ಆಯುಕ್ತರು, ಕರ್ನಾಟಕ ಸರ್ಕಾರ, | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(3) ಸರ್ಕಾರದ ಇಚ್ಛೆಗೆ ಒಳಪಟ್ಟು, ಹತ್ತು ಸರ್ಕಾರೇತರ ಸದಸ್ಯರು ಸರದಿ ಆಧಾರದ ಮೇಲೆ ಮೂರು ವರ್ಷಗಳ ಅವಧಿಯನ್ನು ಹೊಂದಿರತಕ್ಕದ್ದು.

(4) ಮಂಡಳಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರಡಿ ರಚಿಸಿದ ನಿಯಮಗಳಿಗೆ ಒಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(5) ಮಂಡಳಿಯ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಯಾವುದಾದರೂ ಇದ್ದರೆ, ಆ ಭತ್ಯೆಗಳು ಮತ್ತು ಉದ್ಯೋಗದಾತರ ಮತ್ತು ನೌಕರರ ಪ್ರತಿನಿಧಿಗಳ ನೇಮಕಕ್ಕಾಗಿನ ಇತರೆ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**4. ಅನರ್ಹತೆಗಳು ಮತ್ತು ತೆಗೆದು ಹಾಕುವಿಕೆ.-**(1) ಯಾರೇ ವ್ಯಕ್ತಿಯು,-

(ಎ) ಮಂಡಳಿಯ ವೇತನ ಪಡೆಯುವ ನೌಕರನಾಗಿದ್ದರೆ; ಅಥವಾ

(ಬಿ) ಯಾವುದೇ ಸಮಯದಲ್ಲಿ ನ್ಯಾಯ ನಿರ್ಣಿತ ದಿವಾಳಿಯಾಗಿರುವುದು ಅಥವಾ ತನ್ನ ಸಾಲಗಳಿಗೆ ಸಂದಾಯವನ್ನು ತಡೆಹಿಡಿದಿದ್ದರೆ ಅಥವಾ ತನ್ನ ಸಾಲಗಾರರೊಂದಿಗೆ ರಾಜಿ ಮಾಡಿಕೊಂಡಿದ್ದರೆ; ಅಥವಾ

(ಸಿ) ಮನೋವಿಕಲನೆಂದು ಕಂಡು ಬಂದರೆ ಅಥವಾ ಅಸ್ವಸ್ಥ ಚಿತ್ತದವನಾಗಿದ್ದರೆ; ಅಥವಾ

(ಡಿ) ನೈತಿಕ ಪತನವನ್ನು ಒಳಗೊಂಡಿರುವ ಯಾವುದೇ ಅಪರಾಧದ ಅಪರಾಧಿ ಎಂದು ನಿರ್ಣಿತನಾಗಿರುವುದು ಅಥವಾ ನಿರ್ಣಿತನಾಗಿದ್ದರೆ,

-ಆತನು ಮಂಡಳಿಯ ಸದಸ್ಯನಾಗಿ ನಾಮ ನಿರ್ದೇಶಿತನಾಗತಕ್ಕದ್ದಲ್ಲ.

(2) ಯಾರೇ ಸದಸ್ಯನು,-

(ಎ) (1)ನೇ ಉಪ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಅನರ್ಹತೆಗಳಿಗೆ ಒಳಪಟ್ಟಿರುವವನಾಗಿದ್ದರೆ ಅಥವಾ ಒಳಪಟ್ಟಿದ್ದರೆ; ಅಥವಾ

(ಬಿ) ಮಂಡಳಿಯಿಂದ ಅನುಮತಿ ಪಡೆಯದೆ ಮಂಡಳಿಯ ಮೂರಕ್ಕಿಂತ ಹೆಚ್ಚು ನಿರಂತರ ಸಭೆಗಳಿಗೆ ಗೈರು ಹಾಜರಾದರೆ,

-ಆತನನ್ನು ಸರ್ಕಾರವು ಪದದಿಂದ ತೆಗೆದುಹಾಕಬಹುದು.

**5. ಸದಸ್ಯನು ಪದಕ್ಕೆ ರಾಜೀನಾಮೆ ನೀಡುವುದು ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ತುಂಬುವುದು.-** (1) ಒಬ್ಬ ಸದಸ್ಯನು, ಸರ್ಕಾರಕ್ಕೆ ಲಿಖಿತದಲ್ಲಿ ನೋಟೀಸ್ ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ ಆತನ ಪದವನ್ನು ಖಾಲಿಯಾಗಿದೆಯೆಂದು ಭಾವಿಸತಕ್ಕದ್ದು.

(2) ಒಬ್ಬ ಸದಸ್ಯನ ಪದದಲ್ಲಿನ ಆಕಸ್ಮಿಕ ಖಾಲಿ ಸ್ಥಾನವನ್ನು ಸಂಬಂಧಪಟ್ಟ ಪ್ರಾಧಿಕಾರವು ಅನುಕೂಲವಾದಷ್ಟು ಬೇಗನೆ ತುಂಬತಕ್ಕದ್ದು ಮತ್ತು ಹಾಗೆ ನಾಮನಿರ್ದೇಶಿತನಾದ ಸದಸ್ಯನು, ತನ್ನ ನಿಕಟಪೂರ್ವ ಸದಸ್ಯನ ಉಳಿದ ಅವಧಿಗಾಗಿ ಪದವನ್ನು ಹೊಂದಿರತಕ್ಕದ್ದು.

(3) ಮಂಡಳಿಯಲ್ಲಿ ಯಾವುದೇ ಖಾಲಿಸ್ಥಾನ ಇರುವ ಅಥವಾ ಅದರ ರಚನೆಯಲ್ಲಿನ ಯಾವುದೇ ದೋಷದ ಕಾರಣ ಮಾತ್ರದಿಂದಲೆ ಮಂಡಳಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಗಳನ್ನು ಪ್ರಶ್ನಿಸತಕ್ಕದ್ದಲ್ಲ.

**6.ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.-**ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ನಿಯಮಗಳಡಿಯಲ್ಲಿ ನಿಯಮಿಸಲಾದಂತೆ ಇರತಕ್ಕದ್ದು.

**7. ಮಂಡಳಿಯ ಕಾರ್ಯದರ್ಶಿ ಮತ್ತು ಅಧಿಕಾರಿಗಳು.-**ಸರ್ಕಾರವು ಅಧಿಸೂಚನೆಯ ಮುಖಾಂತರ ಮಂಡಳಿಯ ಪ್ರಕಾರ್ಯಗಳನ್ನು ನಿರ್ವಹಿಸಲು ಮಂಡಳಿಯ ಕಾರ್ಯದರ್ಶಿ ಮತ್ತು ಅಧಿಕಾರಿಗಳನ್ನು ನೇಮಕಮಾಡತಕ್ಕದ್ದು.

**8. ಉಪಕರ ಪ್ರಾಧಿಕಾರಗಳು**.- ಅಧಿಕಾರಿ ಅಥವಾ ಪ್ರಾಧಿಕಾರ ಮತ್ತು ಅಧಿಕಾರಿ ಮತ್ತು ಪ್ರಾಧಿಕಾರಕ್ಕೆ ನೆರವು ನೀಡಲು ನೇಮಕಗೊಂಡ ಅಧಿಕಾರಿಗಳು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ ಸಂ. 35)ರ 11 ಮತ್ತು 11ಎ ಪ್ರಕರಣಗಳ ಅಡಿಯಲ್ಲಿ ಅಧಿಕಾರಗಳನ್ನು ಹೊಂದಿರುವರೆಂದು ಭಾವಿಸತಕ್ಕದ್ದು ಹಾಗೂ ಭಾರತ ದಂಡ ಸಂಹಿತೆ, 1860 ( 1860ರ ಕೇಂದ್ರ ಅಧಿನಿಯಮ 45) ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಇವರನ್ನು ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿನ ಪ್ರಾಧಿಕಾರಗಳು ಮೋಟಾರು ವಾಹನಗಳ ಒಂದು ನಿರ್ದಿಷ್ಟ ವಿಧಕ್ಕಾಗಿ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಸೂಚಿಸುವಂಥ ಅಂಥದೇ ಕಾರ್ಯಸಂಸ್ಥೆಗಳಿಗಾಗಿ ಮಾತ್ರ ಹೆಚ್ಚುವರಿ ಪ್ರಾಧಿಕಾರಗಳಾಗಿರತಕ್ಕದ್ದು.

**9. ಕೆಲವು ಸನ್ನಿವೇಶಗಳಲ್ಲಿ ಉಪಕರದ ಸಂಗ್ರಹಣೆ ಮತ್ತು ನಿರ್ಧರಣೆ.-**ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಅಥವಾ ಅಂಥ ಕಾಲದಲ್ಲಿ ಮತ್ತು ಮಧ್ಯಂತರಗಳಲ್ಲಿ ಜನರು ಮತ್ತು ಸರಕು ಸಾರಿಗೆ ವ್ಯವಹಾರವನ್ನು ನಡೆಸುತ್ತಿರುವ ಕಾರ್ಯ ಸಂಸ್ಥೆಗಳಿಗೆ ಉಪಕರವನ್ನು ವಿಧಿಸುವ, ನಿರ್ಧರಿಸುವ ಮತ್ತು ಅವುಗಳಿಂದ ಸಂಗ್ರಹಿಸುವ ಅಧಿಕಾರಗಳನ್ನು ಹೊಂದಿರತಕ್ಕದ್ದು. ಬೇರೆ ಬೇರೆ ಮೋಟಾರು ವಾಹನಗಳಿಗಾಗಿ ಅಥವಾ ಬೇರೆ ಬೇರೆ ಮೋಟಾರು ವಾಹನಗಳ ವರ್ಗಗಳಿಗಾಗಿ ಪ್ರತಿಯೊಂದು ವಹಿವಾಟಿನ ಬಟವಾಡೆಯಲ್ಲಿ ಅದರ ಉಪಕರವನ್ನು ಲೆಕ್ಕಹಾಕುವ ವಿಧಾನವು ನಿಯಮಿಸಿದಂತೆ ಇರತಕ್ಕದ್ದು:

ಪರಂತು, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ ಸಂ. 35)ರ 3ಎ ಮತ್ತು 10ಎ ಪ್ರಕರಣದ ಉಪಬಂಧಗಳು, ಈ ಅಧಿನಿಯಮದ ಅಡಿಯಲ್ಲಿ ಸೃಜಿಸಲಾದ ನಿಧಿಯ ಪುನರ್‌ವಿನಿಯೋಗದ ಮಟ್ಟಿಗೆ, ನಿರ್ಧರಿಸಲಾದ ಅನುಪಾತದಲ್ಲಿ ಮಾತ್ರ ಅನ್ವಯವಾಗತಕ್ಕದ್ದು.

**10. ನೋಂದಣಾಧಿಕಾರಿಗಳ ನೇಮಕಾತಿ**.- ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿತ ಆದೇಶದ ಮೂಲಕ,-

(ಎ) ಈ ಅಧಿನಿಯಮದ ಉದ್ದೇಶಗಳಿಗಾಗಿ ಅದು ಸೂಕ್ತವೆಂದು ಭಾವಿಸುವಂತೆ, ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ನೋಂದಣಿಗಾಗಿನ ನೋಂದಣಿ ಅಧಿಕಾರಿಗಳಾಗಿ ಕಾರ್ಮಿಕ ಇಲಾಖೆಯಲ್ಲಿನ ಕಾರ್ಮಿಕ ನಿರೀಕ್ಷಕರ ದರ್ಜೆಗಿಂತ ಕಡಿಮೆ ಇರದ ಸರ್ಕಾರದ ಅಧಿಕಾರಿಗಳಾಗಿರುವ ಅಂಥ ವ್ಯಕ್ತಿಗಳನ್ನು ನೋಂದಣಾಧಿಕಾರಿಗಳಾಗಿ ನೇಮಕ ಮಾಡಬಹುದು; ಮತ್ತು

(ಬಿ) ನೋಂದಣಾಧಿಕಾರಿಯು, ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಆತನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕ ಅಧಿಕಾರ ಕ್ಷೇತ್ರ ಪರಿಮಿತಿಗಳನ್ನು ಪರಿಭಾಷಿಸಬಹುದು.

(ಸಿ) ನೋಂದಣಿ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಲು ಡಿಜಿಟಲ್ ಪೋರ್ಟಲ್ ಇರತಕ್ಕದ್ದು ಮತ್ತು ಅಂಥದೇ ಪೋರ್ಟಲ್‌ಗಳಿಂದ ಡಿಜಿಟಲ್ ದತ್ತಾಂಶಗಳನ್ನು ಕ್ರೋಢೀಕರಿಸತಕ್ಕದ್ದು.

**11. ಮೋಟಾರು ಸಾರಿಗೆ ಮತ್ತು ಸಂಬಂಧಿತ ಕಾರ್ಮಿಕರ ನೋಂದಣಿ.-** (1) ಈ ಅಧಿನಿಯಮ ಜಾರಿಯಾದ ಕೂಡಲೇ ಪ್ರತಿಯೊಬ್ಬ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕನು ಈ ಅಧಿನಿಯಮದ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಿದ ಅಥವಾ ಅಧಿಕೃತಗೊಳಿಸಿದ

ಡಿಜಿಟಲ್ ಪೋರ್ಟಲ್‌ನಲ್ಲಿ ನೋಂದಣಿ ಅಧಿಕಾರಿಯ ಬಳಿ ನಿಯಮಿಸಬಹುದಾದಂಥ ವಿವರಗಳೊಡನೆ ತನ್ನ ಹೆಸರನ್ನು ನೋಂದಾಯಿಸತಕ್ಕದ್ದು.

(2) ಯಾರೇ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಆತನು ನೋಂದಾಯಿತನಾಗಿದ್ದ ಮತ್ತು ಅರ್ಹನಾಗಿದ್ದ ಹೊರತು ಯಾವುದೇ ಸಾಮಾಜಿಕ ಭದ್ರತೆ ಮತ್ತು ಇತರೆ ಪ್ರಯೋಜನಗಳಿಗಾಗಿ ಅರ್ಹನಾಗತಕ್ಕದ್ದಲ್ಲ.

(3) ಯಾರೇ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕನು, ನಿಯಮಿಸಬಹುದಾದಂತೆ ಯಾವುದೇ ನಿರ್ದಿಷ್ಟ ಯೋಜನೆಗಳಿಗೆ ವಂತಿಗೆಯನ್ನು ಆತನು ಸಂದಾಯ ಮಾಡಿದ್ದ ಹೊರತು ಯಾವುದೇ ಸಾಮಾಜಿಕ ಭದ್ರತೆ ಮತ್ತು ಇತರೆ ಪ್ರಯೋಜನಗಳಿಗಾಗಿ ಅರ್ಹನಾಗತಕ್ಕದ್ದಲ್ಲ.

**12. ಫಲಾನುಭವಿಗಳು ಸಾಮಾಜಿಕ ಭದ್ರತಾ ಯೋಜನೆಯನ್ನು ಕ್ಲೇಮು ಮಾಡುವ ರೀತಿ.-**(1) ನೋಂದಾಯಿತ ಫಲಾನುಭವಿಯು, ಅನುಸೂಚಿಯಲ್ಲಿ ನಮೂದಿಸಿದ ಯಾವುದೇ ಸಾಮಾಜಿಕ ಭದ್ರತೆ ಮತ್ತು ಇತರೆ ಪ್ರಯೋಜನಗಳನ್ನು ಪಡೆಯಲು 13ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ಕ್ಲೇಮುಗಳ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಅರ್ಜಿಯನ್ನು ಸಲ್ಲಿಸುವ ರೀತಿ, ನಮೂನೆ ಮತ್ತು ಇತರೆ ಅರ್ಹತಾ ಮಾನದಂಡಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**13. ಕ್ಲೇಮುಗಳ ಪ್ರಾಧಿಕಾರ.-** (1) ಸರ್ಕಾರವು ಆದೇಶದ ಮೂಲಕ, ಫಲಾನುಭವಿಗಳು ಸಲ್ಲಿಸಿದ ಪ್ರತಿಯೊಂದು ಅರ್ಜಿಯ ಅರ್ಹತೆಗಳ ಕುರಿತು ತೀರ್ಮಾನಿಸಲು ಕಾರ್ಮಿಕ ಇಲಾಖೆಯಲ್ಲಿನ ಕಾರ್ಮಿಕ ಅಧಿಕಾರಿ ದರ್ಜೆಗಿಂತ ಕಡಿಮೆ ಇರದ ಕ್ಲೇಮುಗಳ ಪ್ರಾಧಿಕಾರವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸಬಹುದು ಮತ್ತು ಫಲಾನುಭವಿಗೆ ನಿಯಮಿಸಬಹುದಾದಂಥ ಮೊತ್ತವನ್ನು ಆನ್‌ಲೈನ್ ಪಾವತಿ ಮುಖಾಂತರ ಮಂಜೂರು ಮಾಡಬಹುದು.

(2) ಕ್ಲೇಮುಗಳ ಪ್ರಾಧಿಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಸಾಧ್ಯವಾದಷ್ಟು ಬೇಗನೆ ಯಾವುದೇ ಅಂಥ ಕ್ಲೇಮುಗಳನ್ನು ಸುನಾವಣೆ ಮಾಡತಕ್ಕದ್ದು ಮತ್ತು ತೀರ್ಮಾನಿಸತಕ್ಕದ್ದು.

**14. ನಿಧಿಯ ಸೃಜನೆ.-** ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಮಂಡಳಿಯು ರಚಿಸತಕ್ಕದ್ದು ಮತ್ತು ಅದಕ್ಕೆ ಈ ಮುಂದಿನವುಗಳನ್ನು ಜಮೆ ಮಾಡತಕ್ಕದ್ದು.-

(ಎ) ಪ್ರಕರಣ 2(ಬಿ)ಯಲ್ಲಿ ಪರಿಭಾಷಿಸಲಾದಂತೆ ಸಾರಿಗೆ ಇಲಾಖೆಯಿಂದ ಪುನರ್‌ವಿನಿಯೋಗದ ಮೂಲಕ ಮಂಡಳಿಯು ಸ್ವೀಕರಿಸಿದ ಎಲ್ಲಾ ಮೊತ್ತಗಳು;

(ಬಿ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮಂಡಳಿಗೆ ನೀಡಿದ ಯಾವುದೇ ಅನುದಾನಗಳು ಮತ್ತು ಸಾಲಗಳು ಯಾವುದಾದರೂ ಇದ್ದರೆ ಅವುಗಳು;

(ಸಿ) ಸಾಮಾಜಿಕ ಭದ್ರತೆಗಾಗಿ ಫಲಾನುಭವಿಗಳು ನೀಡಿದ ಎಲ್ಲಾ ವಂತಿಗೆಗಳು; ಮತ್ತು

(ಡಿ) ಸರ್ಕಾರವು ಅಧಿಸೂಚನೆಯ ಮುಖಾಂತರ ಯಾವುದೇ ನಿರ್ದಿಷ್ಟ ಬಗೆಯ ಮೋಟಾರು ವಾಹನಗಳ ಮೇಲೆ ಅಥವಾ ಅಂಥದೇ ಕಾರ್ಯ ಸಂಸ್ಥೆಗಳ ಮೇಲೆ ವಿಧಿಸಿದ ಉಪಕರ, ಅಧಿಭಾರ ಅಥವಾ ಯಾವುದೇ ರೂಪದ ತೆರಿಗೆಯ ಮುಖಾಂತರ ಮಂಡಳಿಯ ಸ್ವೀಕರಿಸಿದ ಎಲ್ಲಾ ಮೊತ್ತ;

(ಇ) ದಾನಿಗಳಿಂದ ಅಥವಾ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಮುಖಾಂತರ ಸ್ವೀಕರಿಸಿದ ಎಲ್ಲಾ ಮೊತ್ತಗಳು;

(ಎಫ್) ಮಂಡಳಿಯು ಮಾಡಿದ ಯಾವುದೇ ಹೂಡಿಕೆ ಅಥವಾ ಷೇರಿನ ಮೇಲಿನ ಲಾಭ, ಬಡ್ಡಿ, ಲಾಭಾಂಶ.

**15. ನಿಧಿಯ ಬಳಕೆ.-**(1) ಮಂಡಳಿಯ ನಿಧಿಗಳನ್ನು,-

(ಎ) ಮಂಡಳಿಯು ನಿರ್ಣಯಿಸಬಹುದಾದಂತೆ ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿನ ಮಂಡಳಿಯ ಆಡಳಿತಾತ್ಮಕ ವೆಚ್ಚಗಳನ್ನು ಮತ್ತು ಯೋಜನೆಯ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಕಾರ್ಯ ಚಟುವಟಿಕೆಗಾಗಿನ ವೆಚ್ಚವನ್ನು;

(ಬಿ) ಮಂಡಳಿಯ ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ವೇತನಗಳು, ಭತ್ಯೆಗಳು ಮತ್ತು ಇತರೆ ಸಂಭಾವನೆಯನ್ನು;

(ಸಿ) ಗುರುತಿಸಲಾದ ಫಲಾನುಭವಿಗಳ ಯಾವುದೇ ಪ್ರೀಮಿಯಂ ಪಾವತಿ, ಯಾವುದೇ ಸರ್ಕಾರಿ ಪಿಂಚಣಿ ನಿಧಿ ವಂತಿಗೆ ಅಥವಾ ಅಪಘಾತ ಪರಿಹಾರಕ್ಕಾಗಿನ ಹಣಕಾಸು ನೆರವು ಪ್ರಯೋಜನ, ಶೈಕ್ಷಣಿಕ ನೆರವು, ಆರೋಗ್ಯ ಪ್ರಯೋಜನ ಮತ್ತು ಪಿಂಚಣಿ ಅಥವಾ ಅಧಿಸೂಚಿಸಬಹುದಾದಂಥ ಯಾವುದೇ ಇತರೆ ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ಸೌಲಭ್ಯಗಳ ಯೋಜನೆಗಾಗಿನ ವೆಚ್ಚುಗಳನ್ನು,

-ಭರಿಸುವುದಕ್ಕಾಗಿ ಬಳಕೆ ಮಾಡತಕ್ಕದ್ದು.

(2) ಮಂಡಳಿಯ ನಿಧಿಗಳನ್ನು ಅನುಸೂಚಿಯಲ್ಲಿ ನಿರೂಪಿಸಲಾದಂಥ ಸಾಮಾಜಿದ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಯೋಜನೆಗಳಿಗಾಗಿ ಬಳಸಿಕೊಳ್ಳಬಹದು.

(3) ಸರ್ಕಾರವು, ಹಣಕಾಸು ನೆರವು ಯೋಜನೆಗಳ ಸ್ವರೂಪ, ಅರ್ಹತಾ ಷರತ್ತುಗಳು, ನೆರವಿನ ಮೊತ್ತ ಮತ್ತು ಈ ಯೋಜನೆಯಡಿಯಲ್ಲಿ ಬರುವ ಕಾರ್ಮಿಕರ ಪ್ರವರ್ಗ ಹಾಗೂ ಅವರ ಅವಲಂಬಿತರು ಯಾರಾದರೂ ಇದ್ದರೆ, ಅವರಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ ಅಗತ್ಯವಾದಂಥ ನಿಯಮಗಳನ್ನು ರಚಿಸಬಹುದು.

**16. ಲೆಕ್ಕಪತ್ರಗಳ ನಿರ್ವಹಣೆ.-** ಮಂಡಳಿಯು ಈ ಅಧಿನಿಯಮದ ಅಡಿಯಲ್ಲಿನ ಸಂಗ್ರಹಣೆಗಳ ಪ್ರತ್ಯೇಕ ಮತ್ತು ಸೂಕ್ತ ಲೆಕ್ಕಪತ್ರಗಳನ್ನು ಮಂಡಳಿ ನಿಧಿಯ ಭಾಗವಾಗಿ ನಿರ್ವಹಿಸತಕ್ಕದ್ದು. ಈ ಉದ್ದೇಶಕ್ಕಾಗಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿಪ್ರತ್ಯೇಕವಾದ ಖಾತೆಯನ್ನು ತೆರೆಯತಕ್ಕದ್ದು ಹಾಗೂ ಇತರ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಸಂಬಂಧಿತ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

**17. ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.-** ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಸಂಗ್ರಹಣೆಗಳ ಮತ್ತು ಪುನರ್‌ವಿನಿಯೋಗ ಲೆಕ್ಕಪತ್ರಗಳನ್ನು ನಿಯಮಿಸಬಹುದಾಂಥ ವಿಧಾನದಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

**18. ಸಂಗ್ರಹಗಳ ನಿರ್ವಹಣೆ.-** ಮಂಡಳಿಯು, ಈ ಅಧಿನಿಯಮದ ಅಡಿಯಲ್ಲಿನ ಸಂಗ್ರಹಣೆಗಳನ್ನು ಮತ್ತು ಪುನರ್‌ವಿನಿಯೋಗಿಸಿದ ನಿಧಿಯನ್ನು ನಿರ್ವಹಿಸತಕ್ಕದ್ದು ಮತ್ತು ಸರ್ಕಾರವು ಅದು ಅಗತ್ಯವೆಂದು ಪರಿಗಣಿಸಿದಂಥ ವಿಧಾನದಲ್ಲಿ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರಿಗಾಗಿ ರೂಪಿಸಿದ ಮತ್ತು ಅಧಿಸೂಚಿಸಿದ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಯೋಜನೆಗಳಲ್ಲಿ ಅಂಥ ಸಂಗ್ರಹಣೆಗಳ ಹೂಡಿಕೆ ಹಾಗೂ ಬಳಕೆಗೆ ಸಂಬಂಧಿಸಿದಂಥ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕದ್ದು.

**19. ಮಂಡಳಿಗೆ ಸರ್ಕಾರದಿಂದ ನಿರ್ದೇಶನ.-** (1)ಸರ್ಕಾರವು, ನಿಧಿಯ ಪುನರ್‌ವಿನಿಯೋಗದ ಮತ್ತು ನಿಧಿಯಿಂದ ಮಾಡಿದ ವೆಚ್ಚದ ಸಂಬಂಧದಲ್ಲಿ ಅಥವಾ ಈ ಅಧಿನಿಯಮದ ಇತರ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತನ್ನ ಅಭಿಪ್ರಾಯದಲ್ಲಿ ಅಗತ್ಯ ಅಥವಾ ವಿಹಿತವಾಗಿರುವಂಥ ನಿರ್ದೇಶನಗಳನ್ನು ಮಂಡಳಿಗೆ ನೀಡಬಹುದು.

(2) ಅಂಥ ನಿರ್ದೇಶನಗಳನ್ನು ಪಾಲಿಸುವುದು ಮಂಡಳಿಯ ಕರ್ತವ್ಯವಾಗಿರತಕ್ಕದ್ದು.

**20. ಅಪೀಲು.-** (1) ಈ ಅಧಿನಿಯಮದ ಅಡಿಯಲ್ಲಿ ನೋಂದಣಿ ಅಧಿಕಾರಿ ಅಥವಾ ಪ್ರಾಧಿಕಾರವು ನೋಂದಣಿ ಮಾಡದಿರುವುದಕ್ಕೆ, ಕ್ಲೇಮುಗಳ ನಿರಾಕರಣೆ ಅಥವಾ ಕ್ಲೇಮುಗಳಿಗೆ ಸಂಬಂಧಿಸಿದ ಯಾವುದೇ ಕುಂದುಕೊರತೆಗೆ ಸಂಬಂಧಿಸಿದಂತೆ ಮಾಡಿರುವ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ರೀತಿಯಲ್ಲಿ

ಅಂಥ ಕಾಲದೊಳಗೆ ಹಾಗೂ ಅಂಥ ಶುಲ್ಕಗಳ ಸಂದಾಯ ಮೇರೆಗೆ ಅಂಥ ಅಫೀಲು ಪ್ರಾಧಿಕಾರಕ್ಕೆ ಅಂಥ ಆದೇಶದ ವಿರುದ್ಧ ಅಪೀಲು ಸಲ್ಲಿಸಬಹುದು.

(2) ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿನ ಅಧಿಸೂಚನೆಯ ಮೂಲಕ, ನೋಂದಣಿ ಪ್ರಾದಿಕಾರಿಯ ದರ್ಜೆಗಿಂತ ಮೇಲಿನ ದರ್ಜೆಯ ಯಾರೇ ಅಧಿಕಾರಿಯನ್ನು ಹಾಗೂ ಕ್ಲೇಮುಗಳ ಮಂಜೂರಾತಿ ಪ್ರಾಧಿಕಾರವನ್ನು ಅಫೀಲು ಪ್ರಾಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(3) ಕ್ಲೇಮುಗಳನ್ನು ನೋಂದಣಿ ಮಾಡದಿರುವುದಕ್ಕೆ ಮತ್ತು ತಿರಸ್ಕರಣೆಗೆ ಪರ್ಯಾಪ್ತ ರುಜುವಾತನ್ನು ಲಗತ್ತಿಸಿದ ಹೊರತು, ಅಪೀಲು ಪ್ರಾಧಿಕಾರವು ಯಾವುದೇ ಅಪೀಲನ್ನು ಪುರಸ್ಕರಿಸತಕ್ಕದ್ದಲ್ಲ.

ಪರಂತು ಅಪೀಲುದಾರನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅಪೀಲು ಪ್ರಾಧಿಕಾರಕ್ಕೆ ಸಮಾಧಾನವಾಗುವ ಹಾಗೆ ಪರ್ಯಾಪ್ತ ಕಾರಣಗಳನ್ನು ಒದಗಿಸಿದರೆ, ಅಪೀಲು ಪ್ರಾಧಿಕಾರವು ಫಲಾನುಭವಿಗಳ ನೋಂದಣಿ ಮಾಡಿಕೊಳ್ಳದಿರುವುದಕ್ಕೆ ಮತ್ತು ಕ್ಲೇಮುಗಳ ತಿರಸ್ಕರಣೆಗೆ ಸಂಬಂಧಿಸಿದಂತೆ ಅದು ತನ್ನ ವಿವೇಚನಾನುಸಾರ ಯುಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

(4) ಅಪೀಲು ಪ್ರಾಧಿಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಸಾಧ್ಯವಾದಷ್ಟು ಬೇಗನೆ ಅಂಥ ಯಾವುದೇ ಅಪೀಲನ್ನು ಸುನಾವಣೆ ಮಾಡತಕ್ಕದ್ದು ಮತ್ತು ತೀರ್ಮಾನಿಸತಕ್ಕದ್ದು ಹಾಗೂ ಅಂಥ ಅಪೀಲಿನ ಕುರಿತು ಅಪೀಲು ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ಕಾನೂನು ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ:

ಪರಂತು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದೆ ಯಾವುದೇ ಅಪೀಲನ್ನು ತೀರ್ಮಾನಿಸತಕ್ಕದ್ದಲ್ಲ.

**21. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.-**ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಪ್ರಕರಣ 6ರ ಅಡಿಯಲ್ಲಿ ನೇಮಕಗೊಂಡ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರಿ ಅಥವಾ ಇತರ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**22. ನಿಯಮಗಳ ರಚನಾಧಿಕಾರ**.- (1) ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಹಾಗೂ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳನ್ನು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಮಂಡಳಿಯ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಮತ್ತು ಉದ್ಯೋಗದಾತರ ಮತ್ತು ನೌಕರರ ಪ್ರತಿನಿಧಿಗಳ ನೇಮಕಕ್ಕಾಗಿನ ಇತರೆ ಷರತ್ತುಗಳು;

(ಬಿ) 6ನೇ ಪ್ರಕರಣದ ಅಡಿಯಲ್ಲಿ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(ಸಿ) ಯಾವುದೇ ಸಾಮಾಜಿಕ ಭದ್ರತೆ ಮತ್ತು ಇತರ ಪ್ರಯೋಜನಕ್ಕಾಗಿ ಅರ್ಹನಾಗುವ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕನು ವಂತಿಗೆಯನ್ನು ಪಾವತಿಸಬೇಕಾದ ನಿರ್ದಿಷ್ಟ ಯೋಜನೆಗಳು;

(ಡಿ) 12ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಫಲಾನುಭವಿಗಳ ನೋಂದಣಿ ರೀತಿ, ನಮೂನೆ ಮತ್ತು ಅರ್ಹತಾ ಮಾನದಂಡಗಳು;

(ಇ) 13ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಪ್ರಯೋಜನಗಳಿಗಾಗಿನ ಕ್ಲೇಮುಗಳ ಸುನಾವಣೆ ಮಾಡುವ ಮತ್ತು ತೀರ್ಮಾನಿಸುವ ರೀತಿ;

(ಎಫ್) 15ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಹಣಕಾಸು ನೆರವಿನ ಸ್ವರೂಪ, ನೆರವಿನ ಮೊತ್ತ ಮತ್ತು ಕಾರ್ಮಿಕರ ಪ್ರವರ್ಗ ಹಾಗೂ ಅವರ ಅವಲಂಬಿತರು;

(ಜಿ) 16ನೇ ಪ್ರಕರಣದ ಅಡಿಯಲ್ಲಿ ಲೆಕ್ಕಪತ್ರಗಳ ಪುಸ್ತಕಗಳು, ರಿಜಿಸ್ಟರ್‌ಗಳು ಮತ್ತು ಇತರೆ ದಾಖಲೆಗಳ ನಿರ್ವಹಣೆ ರೀತಿ;

(ಎಚ್) 17ನೇ ಪ್ರಕರಣದ ಅಡಿಯಲ್ಲಿ ಮಂಡಳಿಯ ಲೆಕ್ಕಪತ್ರಗಳ ಮತ್ತು ನಿಧಿಗಳ ಬಳಕೆ ವಹಿವಾಟುಗಳ ಲೆಕ್ಕಪರಿಶೋಧನೆ ಮಾಡುವ ರೀತಿ;

(ಐ) 20ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸಲ್ಲಿಸುವ ರೀತಿ ಮತ್ತು ಕಾರ್ಯವಿಧಾನಗಳು;

(ಜೆ) 20ನೇ ಪ್ರಕರಣದ (3)ನೇ ಉಪಪ್ರಕರಣದ ಪರಂತುಕದ ಅಡಿಯಲ್ಲಿ ಅಪೀಲುಗಳನ್ನು ಮತ್ತು ಅಂಥ ಇತರೆ ವಿಷಯಗಳನ್ನು ವಿಲೇಮಾಡುವ ರೀತಿ; ಮತ್ತು

(ಕೆ) 20ನೇ ಪ್ರಕರಣದ (4 )ನೇ ಉಪಪ್ರಕರಣದ ಅಡಿಯಲ್ಲಿ ಅಪೀಲು ಅರ್ಜಿಯನ್ನು ವಿಲೇ ಮಾಡುವ ರೀತಿ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ, ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**23. ತೊಂದರೆಗಳನ್ನು ನಿವಾರಿಸುವ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಗಳು ಉದ್ಭವಿಸಿದರೆ, ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ತೊಂದರೆಗಳನ್ನು ನಿವಾರಿಸಲು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂತೆ ತನಗೆ ಅವಶ್ಯವೆಂದು ಕಂಡುಬರಬಹುದಾಂಥ ಉಪಬಂಧಗಳನ್ನು ರಚಿಸಬಹುದು:

ಪರಂತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಈ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**ಅನುಸೂಚಿ**
**(15ನೇ ಪ್ರಕರಣದ (2)ನೇ ಉಪಪ್ರಕರಣವನ್ನು ನೋಡಿ)**

| ಕ್ರ.ಸಂ. | ಸ್ಕೀಮುಗಳು |
|---|---|
| **1** | ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರಿಗೆ ಅಪಘಾತ ಪ್ರಯೋಜನ:<br>(ಎ) ಮರಣ<br>(ಬಿ) ಅಂಗವೈಕಲ್ಯ<br>(ಸಿ) ವೈದ್ಯಕೀಯ ವೆಚ್ಚ ಮರುಪಾವತಿ |
| **2** | ಸ್ವಾಭಾವಿಕ ಮರಣದ ಸಂದರ್ಭದಲ್ಲಿ ನೆರವು (ಶವ ಸಂಸ್ಕಾರ ಖರ್ಚುಗಳನ್ನು ಒಳಗೊಂಡಂತೆ) |
| **3** | ಮೃತ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ನೆರವು |
| **4** | ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ನೆರವು |
| **5** | ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಮಹಿಳಾ ಕಾರ್ಮಿಕರಿಗೆ ಮತ್ತು ಅವರ ಪತಿಯರಿಗೆ ಮಾತೃತ್ವ/ಪಿತೃತ್ವ ನೆರವು |
| **6** | ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕಾದ್ಯಂತ ಕರ್ನಾಟಕ ಸರ್ಕಾರಿ ಯೋಜನೆಗಾಗಿ ಮರುಪಾವತಿ/ನೋಂದಣಿ ಶುಲ್ಕ ಪಾವತಿ |
| **7** | ಪಿಂಚಣಿ ಯೋಜನೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ಶ್ರೀಧರ್)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**

**NOTIFICATION**

**NO. DPAL 07 SHASANA 2024, BENGALURU, DATED: 07.03.2024**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ **ಅಧಿನಿಯಮ**, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ:13)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

# KARNATAKA ACT NO. 13 OF 2024

(First Published in the Karnataka Gazette Extra-ordinary on the 07th day of March, 2024)

## THE KARNATAKA MOTOR TRANSPORT AND OTHER ALLIED WORKERS' SOCIAL SECURITY AND WELFARE ACT, 2024

(Received the assent of the Governor on the 06th day of March, 2024)

An Act to provide social security and other welfare measures to promote the wellbeing of the motor transport and other allied workers and for other matters connected therewith or incidental thereto;

Whereas it is expedient to provide social security and other welfare measures to promote the wellbeing of the motor transport and other allied workers and for matters connected therewith or incidental thereto;

Be it enacted by the Karnataka State Legislature in the seventy fifth year of the Republic of India, as follows:-

**1. Short title, commencement and application.-** (1) This Act may be called the Karnataka Motor Transport and Other Allied Workers' Social Security and Welfare Act, 2024.

(2) It applies to the workmen working in every motor transport undertaking, garages, workshops, automobile body building and any other similar establishments which shall be notified by the State Government from time to time.

(3) It shall come into force on such date as the State Government may, by notification in the Official Gazette, appoint.

**<u>2.</u> Definitions.-** (1) In this Act, unless the context otherwise requires,-

(a)"Board" means the Karnataka State Motor Transport and Other Allied Worker's Social Security and Welfare Board constituted under section 3;

(b)"Cess" means the cess levied and collected under the Karnataka Motor Vehicles Taxation Act, 1957 (Karnataka Act 35 of 1957) and includes such sums or percentage of cess reappropriated to the fund created under section 14;

(c) "Family" means wife or husband, minor sons and unmarried daughters of the registered motor transport and other allied worker and includes his father, mother and mentally retarded or physically challenged or widowed daughters who are solely dependent upon him;

(d) "Fund" means a motor transport and other allied workers social security fund created under section 14 of this Act;

(e) "Government" means Government of Karnataka;

(f) "Motor transport and other allied workers" means and includes,

(i)a person who is employed in a motor transport undertaking directly or through an agency, to work in a professional capacity on a motor vehicle or to attend to duties in connection with the arrival, departure, loading or unloading of such motor vehicle and includes a private transport vehicle driver, conductor, cleaner, supervisor, station staff, line checking staff, booking clerk, cash clerk, depot clerk, time-keeper, watchman or attendant;

(ii) a person working in motor garages, tyre retreading and resoling units, puncture repair shops, wheel balancing and alignment units, water washing units;

(iii) a person working in automobile body building units, tinkering, electrical and AC units;

-but does not include;-

(a) any such worker as defined under clause (l) of section 2 of the Factories Act,1948 (Central Act No 63 of 1948);

(b) any person employed in Government or Government Organization;

(c) who is employed mainly in a managerial or administrative capacity;

(g)“Motor Transport Undertaking” means motor transport undertaking as defined under clause (g) of section 2 of the Motor Transport Workers Act , 1961(Central Act No. 27 of 1961);

(h)"Notification" means a notification published in the Official Gazette under this Act;

(i) "Prescribed" means prescribed by rules made under this Act;

(j)"Schedule" means the schedule appended to this Act; and

(k)"Scheme" means the scheme notified by the Government for the social security and welfare of the motor transport and other allied workers;

(2) All other words and expressions used in relation to motor vehicles but not defined in this Act, shall have the same meaning as assigned to them in the Karnataka Motor Vehicles Taxation Act, 1957 (Karnataka Act 35 of 1957).

**3. Constitution of Board.-** (1) The State Government shall by notification in the official gazette constitute a board to be known as “the Karnataka State Motor Transport and Other Allied Workers' Social Security and Welfare Board” for the purpose of this Act.

(2) The State Board shall consist of following members, namely:-

| | | |
|---|---|---|
| (a) | The Minister of Labour, Government of Karnataka | Ex-officio Chair person. |
| (b) | The Additional Chief Secretary/ Principal Secretary/Secretary of the Department of Labour, Karnataka State | Ex-officio Vice Chair person. |
| (c) | (i) Additional Chief Secretary/Principal Secretary/Secretary, Transport Department,<br>(ii) Additional Chief Secretary/Principal Secretary/Secretary, Department of Industries and Commerce,<br>(iii)Additional Chief Secretary/Principal Secretary/Secretary, Finance Department,<br>(iv) Commissioner of Transport Department<br>(v) Commissioner, Commercial Taxes; | Ex-officio Members |
| (d) | Ten members to be nominated by the Government of Karnataka out of whom,- | Members |

| | | |
|---|---|---|
| | (i) Five members representing the workers engaged in Motor Transport and other allied works.<br>(ii) Five members representing the employers of Motor Transport undertakings and other similar establishments | |
| (e) | The Commissioner of Labour, Government of Karnataka | Ex-officio member Secretary |

(3) Subject to pleasure of the Government, ten non official members shall have a term of three years on rotation basis.

(4) The Board shall be a body corporate by the name aforesaid, having perpetual succession and a common seal, with power subject to the provisions of this Act, or the rules made thereunder to acquire, hold and dispose of property, both moveable and immoveable, and to enter into a contract, and may, by the said name sue and be sued.

(5) The allowances, if any, payable to the members of the Board and other conditions of appointment of the representatives of the employers and employees shall be such as may be prescribed.

**4. Disqualification and removal.-** (1) No person shall be nominated as member of the Board who, -

(a) is a salaried official of the Board; or

(b)is or at any time has been adjudged insolvent or has suspended payment of his debts or has compounded with his creditors; or

(c) is found to be a lunatic or becomes of unsound mind; and

(d) is or has been convicted of any offence involving moral turpitude.

(2) The Government may remove from office any member who,-

(a) is or has become subject to any of the disqualification mentioned in sub-section (1); or

(b) is absent without leave of the Board for more than three consecutive meetings of the Board.

**5. Resignation of Office by member and filling up of casual vacancies.-** (1) A member may resign his office by giving notice thereof in writing to the Government, and on such resignation being accepted, shall be deemed to have vacated his office.

(2) A casual vacancy in the office of a member shall be filled up, as soon as conveniently may be, by the authority concerned and a member so nominated shall hold office for the unexpired portion of the term of the office of his predecessor.

(3) No act or proceedings of the Board shall be questioned on the ground merely of the existence of any vacancy in or any defect in the constitution of the Board.

**6. Powers and Functions of the Board.-** The powers and functions of the board shall be as may be prescribed by the rules.

**7. Secretary and Officers of the Board.-** the Secretary and officers of the board shall be appointed through notification by the Government to carry out the functions of the board.

**8. Cess Authorities.-** An officer or authority and the officers appointed to assist the officer or the authority shall be deemed to have powers under section 11 and section 11A of the Karnataka Motor Vehicles Taxation Act, 1957 (Karnataka Act No.35 of 1957) and to be public servant within the meaning of section 21 of the Indian Penal Code, 1860 (Central Act 45 of 1860).

Provided, the authorities under this Act, shall be additional authorities only for a particular type of motor vehicles or such similar establishments to be notified by the Government through a notification.

**9. Collection and Assessment of cess under certain circumstances.-** The Government shall have powers to levy, assess and collect cess from establishments which are carrying in the business of transport of persons or goods in such manner or such time and intervals in which as may be prescribed. The manner of calculating the cess thereof in each transaction delivery shall be prescribed for different motor vehicles or for different classes of motor vehicles.

Provided that the provisions of section 3A and section 10A of the Karnataka Motor Vehicles Taxation Act, 1957 (Karnataka Act No 35 of 1957) shall apply only to the extent of re-appropriation of the fund created under this Act in the proportion decided.

**10. Appointment of Registering Officers.-** The Government may, by order notify in the official gazette,-

(a) such persons, being officers of the Government not below the rank of labour inspectors in the labour department as it thinks fit, to be the registering officers to register motor transport and other allied workers for the purposes of this Act;
(b) define the limits within which a registering officer shall exercise the powers conferred on him by or under this Act.
(c) a digital portal shall be in place to carry out the registration process along with integration of digital data from such similar portals.

**11. Registration of motor transport and other allied workers.-** (1) Every motor transport and other allied worker shall as soon as commencement of this Act register his name along with such particulars as may be prescribed with the registering officer, in the digital portal designed or authorised for the purpose of this Act.

(2) No motor transport and other allied worker shall be entitled for any social security and other benefits unless he is registered and eligible in accordance with the provisions of this Act.

(3) No motor transport and other allied worker shall be entitled for any social security and other benefit unless he has paid contributions to any specific schemes as prescribed.

**12. Manner of claiming social security benefit.-** (1) A registered motor transport and other allied worker may apply to the notified claims authority under

section 13to avail any of the social security and other benefits mentioned in the schedule.

(2) The manner, format and other eligible criteria shall be as may be prescribed.

**13. Claims Authority.-** (1) The Government may, by order notify in the official gazette, Claims Authority not below the rank of the labour officer in the labour department to decide on the merits of each application applied by the motor transport and other allied worker and sanction such sums as may be prescribed to the motor transport and other allied worker through online payment.

(2) Any such claims shall be heard and decided by the claims authority as expeditiously as possible in such manner as may be prescribed.

**14. Creation of fund.-** There shall be created by the Board a fund to be called the Motor Transport and Other Allied Workers Social Security Fund and there shall be credited thereto,-

(a) all sums received by the board through reappropriation by the

transport department as defined under section 2(b)

(b) any grants and loans made to the board by the Central Government or the State Government if any;

(c) all contributions made by the beneficiaries towards social security;

(d) all sum received by the board through levy of cess, surcharge and any form of taxation on any particular type of motor vehicles or such similar establishments through a notification by the Government.

(e) all sums received through donors or through Corporate Social Responsibility;

(f) The profit, interest, dividend on any investment or share made by the board.

**15. Utilization of fund.-** (1) The funds of the Board shall be utilized for meeting,-

(a) the administrative expenses of the Board in the discharge of its function as may be resolved by the board and to meet the expenditure towards IEC activities of the scheme.

(b) salaries, allowances and other remuneration of the members, officers and other employees of the Board.

(c) expenses towards the schemes for the identified beneficiaries for payment of any premium, contribution to any government pension fund or financial assistance for accident benefit, educational assistance, health benefit and pension or any such other welfare measures and facilities as may be notified.

(2) The funds of the board may be utilized for the social security and welfare schemes as set out in the schedule.

(3) The Government may make such rules as is necessary for providing the nature of financial assistance schemes, the eligibility conditions, the amount of assistance and the category of workers and their dependents, if any, to be covered under the scheme.

**16. Maintenance of Accounts.-** The Board shall maintain a separate and proper accounts of collections under this Act as part of the board's fund. A separate account shall be opened for this purpose in any nationalized bank and maintain other relevant records in such form, and in such manner, as may be prescribed.

**17. Audit of Accounts.-** The accounts of collections and reappropriated funds made under this Act shall be audited in such manner as may be prescribed.

**18. Administration of collections.-** The Board shall administer the collections and re-appropriated funds under this Act and take such decisions regarding investment of such collections and utilization in social security and welfare schemes designed and notified by the Government for motor transport and other allied workers in such manner as it considers necessary.

**19. Direction by the Government to the Board.-** (1) The Government may give directions to the board as in its opinion are necessary or expedient in connection with the reappropriation of funds and expenditure from the fund or for carrying out the other purposes of the Act.

(2) It shall be the duty of the board to comply with such directions.

**20. Appeal.-** (1)Any person aggrieved by an order made by the registering officer or an authority under this Act with respect to non-registration, rejection of claims or any grievance regarding claims may appeal against such order to such appellate authority, in such form and manner, within such time and on payment of fees as may be prescribed.

(2) The Government shall appoint an officer who is above the rank of registering authority and claims sanctioning authority as appellate authority by a notification in official gazette.

(3) No appeal shall be entertained by the appellate authority unless it is accompanied by satisfactory proof of non registering and rejection of claims.

Provided that, the appellate authority may, in its discretion, give directions as it thinks fit in regard to non registration of the beneficiaries and rejection of claims if the applicant furnishes sufficient reasons to its satisfaction in such form and in such manner as may be prescribed.

(4) Any such appeal shall be heard and decided by the appellate authority as expeditiously as possible in such manner as may be prescribed and the decision of the appellate authority on such appeal shall be final and shall not be called in question in any court of law:

Provided that, no appeal shall be decided without giving the appellant a reasonable opportunity of being heard.

**21. Protection of action taken in good faith.-** No suit, prosecution or other legal proceedings shall lie against an officer or the authority or the other officers appointed thereof and for anything which is in good faith done or intended to be done under this Act or the rules made thereunder.

**22. Power to make rules.-** (1) The Government may, subject to the condition of previous publication, by notification make rules for carrying out the purposes of this Act.

(2) In particular and without prejudice to the generality of the foregoing power, such rules may provide for all or any of the matters, namely:-

(a) the allowances, conditions of appointment of representatives from employers and workmen under sub-section (5) of section 3;
(b) the powers and functions of board under section 6;
(c) the specific schemes to which contribution has to be paid by Motor transport and other allied worker for being entitled for any social security and other benefit;
(d) the manner, format and eligible criteria for registration of beneficiaries under sub-section (2) of section 12;
(e) the manner to hear and decide the claims for benefits under sub section (2) of section 13
(f) the nature of financial assistance, amount of assistance, category of workers and their dependents under sub-section (3) of section15;
(g) the manner of maintenance of book of accounts, registers and other records under section 16;
(h) the manner of auditing of accounts of the board and transactions of funds utilization under section 17;
(i) the manner of making an appeal and procedures under sub-section (1) of section 20;
(j) the manner of disbursement of appeals and such other matter as under proviso to sub-section (3) of section 20; and
(k) manner of disbursement of appeal application under sub-section (4) of section 20;

(3) Every rule made under this Act shall be laid, as soon as may be, after it is made, before each House of the State Legislature, while it is in session for a total period of thirty days which may be comprised in one session or in two or more successive sessions, and if, before the expiry of the session in which it is so laid or the session or sessions immediately following, both houses agree in making any modifications in the rule or both Houses agree that the rule should not be made, the rule shall thereafter have effect only in such modified form or be of no effect, as the case may be; so, however, that any such modification or annulment shall be without prejudice to the validity of anything previously done or omitted to be done under that rule.

**23. Power to remove difficulty.-** (1) If any difficulty arises in giving effect to the provisions of this Act, the Government may, by order published in the official gazette, make such provisions, not inconsistent with the provisions of this Act, as may appear to it to be necessary for removing the difficulty:

Provided that no such order shall be made under this section after the expiry of a period of two years from the date of commencement of this Act.

(2)Every order made under this section shall be laid, as soon as may be after it is made, before each house of the State Legislature.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**SCHEDULE**
**[see sub-section (2) of section 15]**

| Sl. No. | Schemes |
|---|---|
| 1 | Accident Benefit to Motor Transport and Other Allied Workers (MTOAW):<br>(a) Death<br>(b) Disability<br>(c) Medical reimbursement |
| 2 | Assistance for Natural Death (inclusive of funeral expenses) |
| 3 | Educational Assistance to the children of deceased Motor transport and other allied Workers |
| 4 | Educational Assistance to the children of Motor transport and other allied Workers |
| 5 | Maternity Benefit to Motor transport and other allied women workers and beneficiaries spouse. |
| 6 | Reimbursement/Payment of registration fee for Karnataka Government scheme such as Ayushman Bharat Arogya Karnataka |
| 7 | Pension Scheme |

The above translation of ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ ಸಂಖ್ಯೆ:13) into English language be published in the official Gazette under clause (3) of Article 348 of the Constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G.SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH Digitally signed by THAMMAIAH
Date: 2024.03.07 19:44:46 +05'30'